# ಮಾತೃಸ್ಮೃತಿ

ಬಂಗಾಳಿ ಮೂಲ : **ಸ್ವಾಮಿ ಶಾರದಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಜಯರಾಮಬಾಟಿಯಿಂದ ದಕ್ಷಿಣೇಶ್ವರಕ್ಕೆ ಹೋಗುವಾಗ (೧೮೭೨) ಶ್ರೀಮಾತೆಯವರಿಗೆ ಮೊದಲ ಬಾರಿ ಕಾಳೀಮಾತೆಯ ದರ್ಶನವಾಯಿತು. (ತಾರಕೇಶ್ವರದ ಬಳಿ, ಒಂದು ಛತ್ರದಲ್ಲಿ)

ಶ್ರೀಮಾತೆಯವರು ದಕ್ಷಿಣೇಶ್ವರದಲ್ಲಿದ್ದಾಗ ಅವರನ್ನು ಶ್ರೀರಾಮಕೃಷ್ಣರು ನಡುನಡುವೆ ಹಲವು ವಿಷಯಗಳ ಬಗ್ಗೆ ಸರಿಯೋ, ತಪ್ಪೋ ಇತ್ಯಾದಿ ಕೇಳುತ್ತಿದ್ದರು. ಅದಕ್ಕೆ ಶ್ರೀಮಾತೆ, ''ಈಗ ನನಗೆ ಉತ್ತರ ಕೊಡಲು ಸಾಧ್ಯವಿಲ್ಲ. ಆಮೇಲೆ, ತಿಳಿದರೆ ಹೇಳುತ್ತೇನೆ'' ಎನ್ನುತ್ತಿದ್ದರು. ಆಗ ಶ್ರೀರಾಮಕೃಷ್ಣರು ಹೇಳುತ್ತಿದ್ದರು: ''ಈಗಲೇ ಹೇಳಿಬಿಡು. ಆಮೇಲೆ ನೀನು ಯಾರ ಹತ್ತಿರಕ್ಕೆ ಹೋಗಿ ತಿಳಿದುಕೊಂಡು ಹೇಳುವೆಯಂತೆ?'' ಆಗಲೂ ಶ್ರೀಮಾತೆ ಹೇಳುತ್ತಿದ್ದರು, ''ಆಮೇಲೆ ಹೇಳುತ್ತೇನೆ, ತಿಳಿದರೆ'' ಎಂದು. ಬಳಿಕ ಅವರು ನಹಬತ್‌ಗೆ ಹೋಗಿ, ಕಾಳೀಮಾತೆಯ ಮುಂದೆ ವ್ಯಾಕುಲತೆಯಿಂದ ಪ್ರಾರ್ಥನೆ ಮಾಡುತ್ತ, ''ಅಮ್ಮಾ, ನಾನು ಏನು ಹೇಳಬೇಕೋ ಅದನ್ನು ತಿಳಿಸಿಕೊಡು'' ಎನ್ನುತ್ತಿದ್ದರು. ಹೀಗೆ ಮಾಡಿದರೆ ಮಾತ್ರವೇ ಅವರಿಗೆ ಆ ವಿಷಯದ ಬಗ್ಗೆ ಏನೋ ಒಂದು ಅರಿವು ಮೂಡುತ್ತಿತ್ತು; ಅದನ್ನು ಅವರು ಶ್ರೀರಾಮಕೃಷ್ಣರಿಗೆ ತಿಳಿಸುತ್ತಿದ್ದರು.

ಕಾಶೀಪುರದ ತೋಟದ ಮನೆಯಲ್ಲಿ ಶ್ರೀರಾಮಕೃಷ್ಣರಿಗೆ ತೀವ್ರ ಕಾಯಿಲೆಯುಂಟಾಗಿದ್ದ ಸಮಯದಲ್ಲಿ, ಶ್ರೀಮಾತೆಯವರು ಅತ್ಯಂತ ಚಿಂತೆಗೊಳಗಾಗಿದ್ದರು. ಅಂತಹ ಸಂದರ್ಭದಲ್ಲಿ ಒಬ್ಬಾಕೆ ಕಪ್ಪಗಿದ್ದ, ಉದ್ದವಾದ ಕೂದಲಿನ ಹೆಣ್ಣು ಮಗಳು ಅವರ ಬಳಿ ಬಂದು ಕುಳಿತುಕೊಂಡಳು. ಆಗ ಶ್ರೀಮಾತೆ ಹೇಳಿದರು, ''ಓ, ನೋಡಮ್ಮಾ, ನೀನು ಬಂದೆಯಲ್ಲ!'' ಆಗ ಕಾಳೀಮಾತೆ, ''ಹೌದು, ದಕ್ಷಿಣೇಶ್ವರದಿಂದ ಬಂದೆ'' ಎಂದಳು. ಸ್ವಲ್ಪ ಹೊತ್ತು ಏನೇನೋ ಮಾತನಾಡುತ್ತ ಕಳೆದ ಮೇಲೆ ಶ್ರೀಮಾತೆ ಗಮನಿಸಿದರು, ಆ ಕಪ್ಪು ಹೆಣ್ಣುಮಗಳು ಕತ್ತು ಬಾಗಿಸಿಕೊಂಡಿದ್ದಳು. ಅವಳನ್ನು ಕೇಳಿದರು, ''ನೀನೇಕೆ ಹೀಗೆ ಕತ್ತು ತಲೆಬಾಗಿಸಿಕೊಂಡಿರುವೆ?'' ಕಾಳೀಮಾತೆ ಹೇಳಿದಳು, ''ಗಂಟಲಲ್ಲಿ ಅನಾರೋಗ್ಯವುಂಟಾಗಿದೆಯಲ್ಲ, ಅದಕ್ಕೆ.'' ಶ್ರೀಮಾತೆ: ''ಓ! ಅವರಿಗೆ ಗಂಟಲಲ್ಲಿ ಕಾಯಿಲೆಯುಂಟಾಗಿದೆ. ನಿನಗೂ ಆಗಿದೆಯೆ?'' ಕಾಳೀಮಾತೆ: ''ಹೌದು.'' ಈ ರೀತಿ ಶ್ರೀರಾಮಕೃಷ್ಣರು ಮತ್ತು ತಾನು ಒಂದೇ ಎಂಬುದನ್ನು ಅವಳು ಶ್ರೀಮಾತೆಯವರಿಗೆ ಅರ್ಥ ಮಾಡಿಸಿಕೊಟ್ಟಳು.

ಶ್ರೀರಾಮಕೃಷ್ಣರು ಕಾಶೀಪುರದಲ್ಲಿದ್ದಾಗ, ಒಂದು ದಿನ ಶ್ರೀಮಾತೆಯವರು ಅವರಿಗೆ ಊಟ ನೀಡಲು ಮೇಲಂತಸ್ತಿಗೆ ಹೋಗಿದ್ದರು. ಮಾತಿನ ನಡುವೆ ಶ್ರೀರಾಮಕೃಷ್ಣರು ಕೇಳಿದರು: ''ಅಷ್ಟಾಕಷ್ಟೇ ಆಟವನ್ನು ಆಡಿದ್ದೀಯಾ ನೀನು?'' (ಅದೊಂದು ಬಗೆಯ ಹಳ್ಳಿಯ ಆಟ) ಶ್ರೀಮಾತೆ, ''ಇಲ್ಲ'' ಎಂದರು. ಆಗ ಶ್ರೀರಾಮಕೃಷ್ಣರು, ''ಅದರಲ್ಲಿ ಜೋಡಿ ಬಿದ್ದರೆ, ಅದನ್ನು ಕಾಯಿಯಿಂದ ಹೊಡೆಯಲಾಗದು. ಅದೇ ರೀತಿ ಇಷ್ಟದೇವತೆಯೊಂದಿಗೆ ಒಂದಾಗಬೇಕು. ಹಾಗಾದರೆ, ಅನಂತರ ಭಯವೇನೂ ಇರದು. ಒಂದಂಕಿ ಕಾಯಿ ಬಿದ್ದರೆ, ಥೊಪ್ಪನೆ ಹೊಡೆದುಹಾಕಿ ಬಿಡುತ್ತಾರೆ. ಅಂತೆಯೇ ಇಷ್ಟದೇವತೆಯೊಂದಿಗೆ ಜೋಡಿ ಮಾಡಿಕೊಂಡು ಸಂಸಾರ ನಡೆಸಿದರೆ, ಬಳಿಕ ಯಾರೂ ಹೊಡೆದು ಹಾಕುವ ಭಯವಿರದು.'' ಶ್ರೀಮಾತೆಯವರು ಇದನ್ನೆಲ್ಲ ಕೇಳಿಸಿಕೊಳ್ಳುತ್ತಲೇ ಶ್ರೀರಾಮಕೃಷ್ಣರ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು. ಅದನ್ನು ನೋಡಿ ಶ್ರೀರಾಮಕೃಷ್ಣರು ನಗುತ್ತ ಕೇಳಿದರು: ''ಏನಮ್ಮಾ, ಕೇಳಿಸಿಕೊಳ್ಳುತ್ತಿದ್ದೀಯಾ? ಇಲ್ಲವಾ?'' ಶ್ರೀಮಾತೆ ಹೇಳಿದರು, ''ನನಗೆ ಬೆಚ್ಚಿಬಿದ್ದಂತಾಯಿತು.''

ಶ್ರೀಮಾತೆಯವರು ಹಲಧಾರಿಯನ್ನು ಎಂದೂ ನೋಡಲಿಲ್ಲ. ಕಾರಣ, ಅವರು ತೀರಿಕೊಂಡ ನಂತರವೇ ಶ್ರೀಮಾತೆಯವರು ದಕ್ಷಿಣೇಶ್ವರಕ್ಕೆ ಬಂದಿದ್ದರು. ಹಲಧಾರಿಗೂ ಶ್ರೀರಾಮಕೃಷ್ಣರಿಗೂ ಇದ್ದ ಸಂಬಂಧವೇನು ಎಂದು ಅರಿಯದೆ, ಶ್ರೀರಾಮಕೃಷ್ಣರ ಎದುರಲ್ಲೇ ಶ್ರೀಮಾತೆಯವರು ಅವರ (ಹಲಧಾರಿಯ) ಹೆಸರನ್ನು ಹಿಡಿದು ಕರೆದಾಗ, ಶ್ರೀರಾಮಕೃಷ್ಣರು ಹೃದಯನಿಗೆ ಹೇಳಿದರು, ''ಹಲಧಾರಿ ಶ್ರೀಮಾತೆಯವರಿಗೆ ಸಂಬಂಧದಲ್ಲಿ ಭಾವನಾಗಬೇಕು – ಆದ್ದರಿಂದ ಅವರ ಹೆಸರು ಹಿಡಿದು ಕರೆಯಬಾರದು'' ಎಂದು.

ಶ್ರೀಮಾತೆಯವರ ಷೋಡಶೀಪೂಜೆ ನಡೆದಾಗ ಬಹುಶಃ ಹೃದಯನು ಕಾಳೀಮಂದಿರದ ಪೂಜೆಯಲ್ಲಿ ನಿರತನಾಗಿದ್ದಿರಬೇಕು. ಅಥವಾ, ಅವನಿಗೆ ತಿಳಿಯದಂತೆ ಈ ಪೂಜೆಯನ್ನು ಮಾಡಲಾಯಿತೋ, ಸರಿಯಾಗಿ ತಿಳಿದುಬರುವುದಿಲ್ಲ. ಶ್ರೀಮಾತೆಯವರು ಗೌರೀಪಂಡಿತನನ್ನು ನೋಡಿದ್ದರು. ಅವರು ಷೋಡಶೀ ಪೂಜೆಯ ನಂತರ ಊರಿಗೆ ಮರಳಿ ಹೋದರು. ∩ ✻

---

∩ ಶ್ರೀಮಾತೆಯವರ ಬಗೆಗಿನ ಈ ಲೇಖನವು ಯೋಗಿನ್-ಮಾ ಅವರ ಮೂಲಕ ಲಭಿಸಿತು. ಆಕರ : **'ರಾಮಕೃಷ್ಣ-ಶಾರದಾಮೃತ'** ಗ್ರಂಥ, ಸ್ವಾಮಿ ನಿರ್ಲೇಪಾನಂದ.